ಕರ್ನಾಟಕ ಸರ್ಕಾರ

(ಪೊಲೀಸ್ ಇಲಾಖೆ)

ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಪೊಲೀಸ್ ಆಯುಕ್ತರು ಬೆಳಗಾವಿ ನಗರರವರ ಕಾರ್ಯಾಲಯ.

ವಿಷಯ :-ದಿನಾಂಕ:06/07/2024 ರಂದು ಬೆಳಗಾವಿ ನಗರದಲ್ಲಿ ಮೊಹರಂ ಹಬ್ಬದ ಕೊನೆಯ ದಿನದ ಮೆರವಣಿಗೆ ಕಾಲಕ್ಕೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹೀತದೃಷ್ಟಿಯಿಂದ ಬೆಳಗಾವಿ ನಗರ ಮತ್ತು ಬೆಳಗಾವಿ ತಾಲೂಕಿನಾದ್ಯಂತ ಮದ್ಯ ಮಾರಾಟವನ್ನು ನಿಷೇಧಿಸಿ ಆದೇಶ ಹೊರಡಿಸಿದ ಕುರಿತು.

ಉಲ್ಲೇಖ :-ಉಪ ಪೊಲೀಸ್ ಆಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ ಬೆಳಗಾವಿ ನಗರ ರವರ ವರದಿ ಸಂ: ಸಿಎಸ್‌ಬಿ-5/ಮೊಹರಮ್/1392/2025 ದಿನಾಂಕ:04/07/2025.

* * * * *

ಪ್ರಸ್ತಾವನೆ :

ದಿನಾಂಕ:06/07/2025 ರಂದು ಬೆಳಗಾವಿ ನಗರದಲ್ಲಿ ಮೊಹರಂ ಹಬ್ಬದ ಕೊನೆಯ ದಿನದ ಮೆರವಣಿಗೆ ನಡೆಯಲಿರುವುದರಿಂದ, ಮೊಹರಂ ಹಬ್ಬದ ಮೆರವಣಿಗೆ ಕಾಲದಲ್ಲಿ ಯಾವುದೇ ಅಹೀತಕರ ಘಟನೆಗಳು ನಡೆಯದಂತೆ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮುಂಜಾಗೃತಾ ಕ್ರಮವಾಗಿ ದಿನಾಂಕ:05/07/2025 ರಂದು ಸಾಯಂಕಾಲ 06.00 ಗಂಟೆಯಿಂದ ದಿನಾಂಕ:07/07/2025 ರಂದು ಬೆಳಗ್ಗೆ 0600 ಗಂಟೆಯವರೆಗೆ ಮದ್ಯ ಮಾರಾಟದ ಅಂಗಡಿಗಳು, ಬಾರ್/ರೆಸ್ಟೋರೆಂಟ್‌ಗಳು, ಕ್ಲಬ್‌ಗಳು ಹಾಗೂ ದಾಸ್ತಾನು ಡಿಪೋಗಳಿಂದ ಸರಬರಾಜನ್ನು ಬಂದ್ ಇಡುವಂತೆ ಆದೇಶವನ್ನು ಹೊರಡಿಸಬೇಕಾಗಿ ಪೊಲೀಸ್ ಉಪ ಆಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ, ಬೆಳಗಾವಿ ನಗರ ರವರು ಉಲ್ಲೇಖಿತ ವರದಿಯಲ್ಲಿ ಕೋರಿರುತ್ತಾರೆ. ಈ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ್ದು, ಬೆಳಗಾವಿ ನಗರ ಹಾಗೂ ಬೆಳಗಾವಿ ತಾಲೂಕಿನಾದ್ಯಂತ ಸಾರ್ವಜನಿಕ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಉಲ್ಲೇಖಿತ ವರದಿಯನ್ನು ಒಪ್ಪಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

:: ಆದೇಶ ::

ಸಂ: ಎಂಎಚಿ-1/ಸಿಓಪಿ/ಬೆಳಗಾವಿ/ಮ.ನಿ/75/2025 ದಿನಾಂಕ: 4 /07/2025.

ಬೆಳಗಾವಿ ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 21(1) ರ ಪ್ರಕಾರ ಪ್ರದತ್ತವಾದ ಅಧಿಕಾರ ಹೊಂದಿದವನಾಗಿ ಬೆಳಗಾವಿ ನಗರ ಪೊಲೀಸ್ ಆಯುಕ್ತ ಆದ ನಾನು ಬೊರಸೆ ಭೂಷಣ್ ಗುಲಾಬರಾವ್, ಐಪಿಎಸ್, ಬೆಳಗಾವಿ ನಗರದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ **ದಿನಾಂಕ:05/07/2025 ರಂದು ಸಾಯಂಕಾಲ 06.00 ಗಂಟೆಯಿಂದ ದಿನಾಂಕ:07/07/2025 ರಂದು ಬೆಳಗ್ಗೆ 0600 ಗಂಟೆಯವರೆಗೆ** ಮದ್ಯದ ಅಂಗಡಿಗಳಲ್ಲಿ, ವೈನಶಾಪ್, ಬಾರ್‌ಗಳಲ್ಲಿ, ಕ್ಲಬ್‌ಗಳಲ್ಲಿ ಮತ್ತು ಹೊಟೇಲ್‌ಗಳಲ್ಲಿ ಮದ್ಯ ಮಾರಾಟ ಮತ್ತು ಮದ್ಯ ಸಾಗಣಿಕೆಯನ್ನು ನಿಷೇಧಿಸಿ, ಮದ್ಯದ ಅಂಗಡಿಗಳನ್ನು ಹಾಗೂ ಕೆಎಸ್‌ಬಿಸಿಎಲ್ ಡಿಪೋಗಳನ್ನು, ಹೊಟೇಲ್‌ಗಳಲ್ಲಿರುವ ಬಾರ್‌ಗಳನ್ನು ಮುಚ್ಚತಕ್ಕದ್ದು ಹಾಗೂ ಎಲ್ಲ ಅಬಕಾರಿ ಸನ್ನದು ಅಂಗಡಿಗಳನ್ನು ಮುಚ್ಚಿ ಸೀಲ್ ಹಾಕತಕ್ಕದ್ದು, ಇದಲ್ಲದೇ ಪರಿಸ್ಥಿತಿಗೆ ಅನುಗುಣವಾಗಿ ಸಾರ್ವಜನಿಕ ಶಾಂತತೆಯನ್ನು ಕಾಯ್ದುಕೊಂಡು ಬರುವ ಹಿತದೃಷ್ಟಿಯಿಂದ ಅಬಕಾರಿ ಇನ್ಸ್‌ಪೆಕ್ಟರ್ ಹಾಗೂ ಉಪ ವಿಭಾಗ ಅಬಕಾರಿ ಅಧೀಕ್ಷಕರು, ಶಾಂತಿ ಪಾಲನೆಗಾಗಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

ಅಬಕಾರಿ ಉಪ ಆಯುಕ್ತರು, ಬೆಳಗಾವಿ ತಾಲೂಕ ಮತ್ತು ಉಪ ಪೋಲೀಸ್ ಆಯುಕ್ತರು (ಕಾ&ಸು) ಬೆಳಗಾವಿ ನಗರ ಹಾಗೂ ಅವರ ಅಧೀನ ಅಧಿಕಾರಿಗಳು, ಹೆಚ್ಚುವರಿ ಅಬಕಾರಿ ಅಧೀಕ್ಷಕರು, ಬೆಳಗಾವಿ ಮತ್ತು ಅಬಕಾರಿ ಉಪ-ಅಧೀಕ್ಷಕರು, ಬೆಳಗಾವಿ ಇವರುಗಳು ತಮ್ಮ ವ್ಯಾಪ್ತಿಯಲ್ಲಿ ಈ ಅಧಿಸೂಚನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ಬರುವಂತೆ ಕ್ರಮ ಜರುಗಿಸತಕ್ಕದ್ದು.

ಈ ಆದೇಶವನ್ನು ಉಲ್ಲಂಘನೆ ಮಾಡಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು. ಈ ಆದೇಶವನ್ನು ಈ ದಿವಸ ದಿನಾಂಕ:04-07-2025 ರಂದು ನನ್ನ ಹಸ್ತಾಕ್ಷರ ಮತ್ತು ಮೊಹರಿನೊಂದಿಗೆ ಹೊರಡಿಸಲಾಗಿದೆ.

(ಬೊರಸೆ ಭೂಷಣ್ ಗುಲಾಬರಾವ್, **ಐಪಿಎಸ್**)
ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಗಳು,
ಹಾಗೂ ಪೋಲೀಸ್ ಆಯುಕ್ತರು,
ಬೆಳಗಾವಿ ನಗರ.

ಗೆ,

1) ಉಪ ಪೋಲೀಸ್ ಆಯುಕ್ತರು, ಕಾನೂನು & ಸುವ್ಯವಸ್ಥೆ,/ಅಪರಾಧ & ಸಂಚಾರ ವಿಭಾಗ ಬೆಳಗಾವಿ ನಗರ.
2) ಉಪ ಆಯುಕ್ತರು ಅಬಕಾರಿ ಇಲಾಖೆ, ಬೆಳಗಾವಿ.
3) ಉಪವಿಭಾಗಾಧಿಕಾರಿ ಮತ್ತು ಉಪವಿಭಾಗೀಯ ದಂಡಾಧಿಕಾರಿ, ಬೆಳಗಾವಿ ಉಪವಿಭಾಗ, ಬೆಳಗಾವಿ.
4) ಬೆಳಗಾವಿ ನಗರದ ಎ.ಸಿ.ಪಿ. ಮಾರ್ಕೆಟ್, ಖಡೇಬಜಾರ ಹಾಗೂ ಬೆಳಗಾವಿ ಗ್ರಾಮೀಣ.
5) ತಹಶೀಲ್ದಾರರು ಮತ್ತು ತಾಲೂಕು ದಂಡಾಧಿಕಾರಿಗಳು ಬೆಳಗಾವಿ ತಾಲೂಕು.
6) ಬೆಳಗಾವಿ ನಗರದ ಪೋಲೀಸ್ ಕಮೀಷನರೇಟ್ ಘಟಕದ ಎಲ್ಲ ಪೋಲೀಸ್ ಇನ್ಸ್‌ಪೆಕ್ಟರ್ ರವರಿಗೆ.
7) ಜಿಲ್ಲಾ ವಾರ್ತಾ & ಪ್ರಚಾರ ಅಧಿಕಾರಿಗಳು ಬೆಳಗಾವಿ ಇವರಿಗೆ ಸೂಕ್ತ ಸಮಯದಲ್ಲಿ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಕ್ಕಾಗಿ.
8) ಪೋಲೀಸ್ ಇನಸ್ಪೆಕ್ಟರ್, ಸಿ.ಎಸ್.ಬಿ ಪೋಲೀಸ್ ಆಯುಕ್ತರ ಕಛೇರಿ ಬೆಳಗಾವಿ.

ಪ್ರತಿ ಮಾಹಿತಿಗಾಗಿ :-

1) ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ.
2) ಹೆಚ್ಚುವರಿ ಆಯುಕ್ತರು ಅಬಕಾರಿ ಇಲಾಖೆ, ಬೆಳಗಾವಿ.
3) ಜಂಟಿ ಆಯುಕ್ತರು ಅಬಕಾರಿ, ಇಲಾಖೆ, ಬೆಳಗಾವಿ.